**ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಐವನ್ ಡಿ' ಸೋಜಾ ಇವರು ನಿಯಮ-330ಎ ರಡಿ ಮಂಡಿಸಿರುವ ಸೂಚನಾ ಪತ್ರಕ್ಕೆ ಉತ್ತರ**

~****~

**ಪ್ರಶ್ನೆ**

ಮಂಗಳೂರು ಮಹಾನಗರ ಪಾಲಿಕೆಯ ಚುನಾಯಿತ ಆಡಳಿತ ಮಂಡಳಿ ದಿನಾಂಕ 12-03-2019ಕ್ಕೆ ಮುಕ್ತಾಯಗೊಂಡಿದ್ದು, ಆ ದಿನದಿಂದ ಆಡಳಿತ ಅಧಿಕಾರಿ ನೇಮಕಗೊಂಡು 7 ತಿಂಗಳುಗಳು ಕಳೆದಿದ್ದು, ಅಭಿವೃದ್ಧಿ ಕಾಮಗಾರಿಗಳು ಸಂಪೂರ್ಣವಾಗಿ ಸ್ಥಗಿತಗೊಂಡು, ಯಾವುದೇ ಹೊಸ ಯೋಜನೆಗಳು ಕಾರ್ಯಗತಗೊಂಡಿರುವುದಿಲ್ಲ. ತೆರಿಗೆ ವಸೂಲಾತಿ ಕುಂಠಿತಗೊಂಡಿದೆ. ಸ್ಮಾರ್ಟ್ ಸಿಟಿ ಅಭಿವೃದ್ಧಿ ಸಂಪೂರ್ಣ ನಿರ್ಲಕ್ಷಕ್ಕೊಳಗಾಗಿದ್ದು, ನಗರದ ಅಭಿವೃದ್ಧಿಯಾಗದೆ ಸಾರ್ವಜನಿಕ ಹಣ ಪೋಲಾಗುತ್ತಿದೆ.

ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 33056/2019 PIL ನಲ್ಲಿ ಆದೇಶವನ್ನು ನೀಡಿ ಚುನಾವಣೆಯನ್ನು ದಿನಾಂಕ 31-10-2019ರೊಳಗೆ ನಡೆಸಿ, ದಿನಾಂಕ 15-11-2019 ರೊಳಗೆ ಫಲಿತಾಂಶ ಪ್ರಕಟಿಸಬೇಕು ಹಾಗೂ ಚುನಾಯಿತ ಆಡಳಿತ ಮಂಡಳಿ ಕೂಡಲೇ ಅಸ್ತಿತ್ವಕ್ಕೆ ಬರಬೇಕೆಂದು ನಿರ್ದೇಶನ ನೀಡಿದ್ದರೂ ಚುನಾವಣಾ ಆಯೋಗ ಈವರೆವಿಗೂ ಚುನಾವಣೆ ನಡೆಸದೇ ನ್ಯಾಯಾಲಯದ ಆದೇಶವನ್ನು ಪಾಲಿಸದಿರುವುದರಿಂದ, ಸರ್ಕಾರಕ್ಕೆ ಕೂಡಲೇ ಈ ಬಗ್ಗೆ ಕ್ರಮ ಕೈಗೊಂಡು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಚುನಾವಣಾ ದಿನಾಂಕವನ್ನು ಘೋಷಿಸಿ, ಚುನಾಯಿತ ಆಡಳಿತ ಮಂಡಳಿಯನ್ನು ಅಸ್ತಿತ್ವಕ್ಕೆ ತಂದು ಅಭಿವೃದ್ಧಿಗೆ ಚಾಲನೆ ನೀಡಬೇಕೆಂದು ವಿಶೇಷ ಪ್ರಸ್ತಾವನೆ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಉತ್ತರ**

ಅಧಿಸೂಚನೆ ಸಂಖ್ಯೆ: ನಅಇ 67 ಎಂಎಲ್ಆರ್ 2018 (10), ದಿನಾಂಕ 10.08.2018ರಲ್ಲಿ 2011ರ ಜನಗಣತಿಯನ್ನಾಧರಿಸಿ ಮಂಗಳೂರು ಮಹಾನಗರ ಪಾಲಿಕೆಯ 60 ವಾರ್ಡ್‌ಗಳಿಗೆ ವಾರ್ಡ್‌ವಾರು ಮೀಸಲಾತಿಯನ್ನು ನಿಗದಿಪಡಿಸಲಾಗಿದೆ. ಸದರಿ ಅಧಿಸೂಚನೆಯನ್ನು ಪ್ರಶ್ನಿಸಿ, ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಅರ್ಜಿ ಸಂಖ್ಯೆ 44499/2018, 50796/2018, 53609-611/2018, 54664/2018, 43519/2018 ಮತ್ತು 44520/2018 ಪ್ರಕರಣಗಳು ದಾಖಲಾಗಿದ್ದು, ಈ ಪ್ರಕರಣಗಳಲ್ಲಿ ನ್ಯಾಯಾಲಯವು ದಿನಾಂಕ 14.01.2019ರಂದು ತೀರ್ಪು ನೀಡಿ ಮಂಗಳೂರು ಮಹಾನಗರ ಪಾಲಿಕೆಯ ವಾರ್ಡ್‌ವಾರು ಮೀಸಲಾತಿಯನ್ನು ರದ್ದುಪಡಿಸಿರುತ್ತದೆ.

ರಿಟ್ ಅರ್ಜಿ ಸಂಖ್ಯೆ 44499/2018, 50796/2018, 53609-611/2018, 54664/2018, 43519/2018 ಮತ್ತು 44520/2018 ಪ್ರಕರಣಗಳಲ್ಲಿ ದಿನಾಂಕ 14.01.2019ರಂದು ನೀಡಲಾದ ತೀರ್ಪನ್ನು ಪ್ರಶ್ನಿಸಿ, ಸರ್ಕಾರವು ರಿಟ್ ಅಪೀಲು ಸಂಖ್ಯೆಃ 318/2019 ದಾಖಲಿಸಿದ್ದು, ಈ ರಿಟ್ ಅಪೀಲು ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ 31.05.2019ರಂದು ತೀರ್ಪು ನೀಡಿ, ರಿಟ್ ಅರ್ಜಿ ಸಂಖ್ಯೆ ರಿಟ್ ಅರ್ಜಿ ಸಂಖ್ಯೆಃ 44499/2018, 50796/2018, 53609-611/2018, 54664/2018, 43519/2018 ಮತ್ತು 44520/2018 ಪ್ರಕರಣಗಳಲ್ಲಿ ನೀಡಲಾದ ದಿನಾಂಕ 14.01.2019ರ ತೀರ್ಪನ್ನು ರದ್ದುಪಡಿಸಿರುತ್ತದೆ.

ಮಂಗಳೂರು ಮಹಾನಗರ ಪಾಲಿಕೆಯ ವಾರ್ಡುಗಳಿಗೆ ಚುನಾವಣೆ ನಡೆಸುವಂತೆ ನಿರ್ದೇಶನ ನೀಡುವಂತೆ ಕೋರಿ ಶ್ರೀ ಅಬ್ದುಲ್ ಗಫೂರ್ ಮತ್ತು ಇತರರು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಅರ್ಜಿ ಸಂಖ್ಯೆಃ 33056/2019 PIL ದಾಖಲಿಸಿದ್ದು, ಈ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ 27.08.2019ರಂದು ತೀರ್ಪು ನೀಡಿ, ಮಂಗಳೂರು ಮಹಾನಗರ ಪಾಲಿಕೆಯ ವಾರ್ಡುಗಳಿಗೆ ಆದಷ್ಟು ಬೇಗ ಚುನಾವಣೆ ನಡೆಸಿ ದಿನಾಂಕ 15.11.2019ರೊಳಗೆ ಫಲಿತಾಂಶ ಪ್ರಕಟಿಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ (ಪ್ರತಿವಾದಿ-2) ನಿರ್ದೇಶನ ನೀಡಿರುತ್ತದೆ. ನ್ಯಾಯಾಲಯದ ಆದೇಶದನ್ವಯ ರಾಜ್ಯ ಚುನಾವಣಾ ಆಯೋಗವು ಮಂಗಳೂರು ಮಹಾನಗರ ಪಾಲಿಕೆಯ ವಾರ್ಡುಗಳಿಗೆ ಚುನಾವಣೆ ನಡೆಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ:ನಅಇ 10 ಎಲ್‌ಸಿಕ್ಯೂ 2019

(ಆರ್. ಅಶೋಕ್)
ಕಂದಾಯ ಮತ್ತು ಪೌರಾಡಳಿತ ಸಚಿವರು